ನಿಮ್ಮಲ್ಲಿ ಯಾವುದೇ ಪ್ರಶ್ನೆಗಳು/ ಸಲಹೆಗಳಿದ್ದಲ್ಲಿ ಅಥವಾ ಯಾವುದೇ ಸಹಕಾರ ಬೇಕಿದ್ದಲ್ಲಿ ನಮ್ಮನ್ನು ಸಂಪರ್ಕಿಸಿ.

**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**

ಮಾನಸಗಂಗೋತ್ರಿ, ಮೈಸೂರು 570 006

**ದೂರವಾಣಿ :** 0821 2514449 / 2514618

**ಫ್ಯಾಕ್ಸ್ :** 0821 2510515

**ಇ-ಮೇಲ್ :** director@aiishmysore.in

**ಕೆಲಸದ ವೇಳೆ :** ಬೆಳಗ್ಗೆ 9-00 ರಿಂದ ಸಂಜೆ 5-30 ರವರೆಗೆ

ಸೋಮವಾರದಿಂದ - ಶುಕ್ರವಾರದವರೆಗೆ

(ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)

**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**

ಮಾನಸಗಂಗೋತ್ರಿ, ಮೈಸೂರು - 570 006



# ಪಾಕೆಟ್ ಮಾದರಿಯ ಶ್ರವಣೋಪಕರಣದ ಸರಳ ಸಮಸ್ಯೆಗಳ ಪರಿಹಾರ

## ಪಾಕೆಟ್ ಮಾದರಿಯ ಶ್ರವಣೋಪಕರಣದ ಸರಳ ಸಮಸ್ಯೆಗಳ ಪರಿಹಾರ

ನೀವು ನಿಮ್ಮ ಶ್ರವಣೋಪಕರಣದ ನಿತ್ಯ ಬಳಕೆಯಲ್ಲಿ, ಅತ್ಯಂತ ಕಡಿಮೆ ಶಬ್ದ, ಅಥವಾ ಶಬ್ದವೇ ಇಲ್ಲದಿರುವಿಕೆ, ವಿರೂಪಗೊಂಡ ಶಬ್ದ, ಅಸ್ಪಷ್ಟ ಶಬ್ದ ಮುಂತಾದ ಅನೇಕ ತೊಂದರೆಗಳನ್ನು ಅನುಭವಿಸಿರಬಹುದು. ಈ ಬಗೆಯ ಸಮಸ್ಯೆಗಳನ್ನು ಶ್ರವಣೋಪಕರಣ ಉಪಯೋಗಿಸುವವರೆ ಪರೀಕ್ಷಿಸಬಹುದು.

ಈ ಪ್ರತಿಯು ಪಾಕೆಟ್ ಮಾದರಿಯ ಶ್ರವಣೋಪಕರಣದ ಸಾಮಾನ್ಯ ಸಮಸ್ಯೆಗಳು, ಸಮಸ್ಯೆಗಳ ಕಾರಣಗಳು ಹಾಗೂ ಈ ಸಮಸ್ಯೆಗಳನ್ನು ಹೇಗೆ ಬಗೆಹರಿಸಬಹುದು ಎಂಬುದನ್ನು ವಿವರಿಸುತ್ತದೆ.

| ಸಮಸ್ಯೆ | ಕಾರಣ | ಪರಿಹಾರ |
|---|---|---|
| ಶಬ್ದವಿಲ್ಲದಿರುವುದು | ಶ್ರವಣೋಪಕರಣವು "T" ಅಥವಾ "O" ಸ್ಥಿತಿಯಲ್ಲಿ ಇರುವುದು. | "M" ಸ್ಥಿತಿಗೆ ಬದಲಾಯಿಸಿ |
| | ಕ್ಷೀಣವಾದ ಬ್ಯಾಟರಿ | ಹೊಸ ಬ್ಯಾಟರಿಗಳಿಗೆ ಬದಲಾಯಿಸಿ |
| | ಬ್ಯಾಟರಿಗಳ ತಪ್ಪು ಜೋಡಣೆ | ಬ್ಯಾಟರಿಯ "+ve" ಹಾಗೂ "-ve" ತುದಿಗಳನ್ನು ಬದಲಿಸಿ |
| | ಬ್ಯಾಟರಿಯ ಸೋರುವಿಕೆ | ಬ್ಯಾಟರಿಗಳನ್ನು ಬದಲಿಸಿ |
| | ಮುರಿದ ಬ್ಯಾಟರಿ ಸಂಪರ್ಕಗಳು | ರಿಪೇರಿಗೆ ಕಳುಹಿಸಿ |
| | ಶ್ರವಣೋಪಕರಣದ ತಂತಿಗೆ ಒಂದು ಅಥವಾ ಎರಡು ತುದಿಗಳಿಗೆ ಜೋಡಣೆ ಇಲ್ಲದೆ ಇರುವುದು. | ತಂತಿಯನ್ನು ಶ್ರವಣೋಪಕರಣ ಹಾಗೂ ರಿಸೀವರ್‌ನ ಜೊತೆ ಸೇರಿಸಿ |
| | ಮುರಿದ/ಹಾಳಾದ ತಂತಿ | ತಂತಿಯನ್ನು ಬದಲಾಯಿಸಿ |
| | ಗುಗ್ಗೆ ಅಥವಾ ಕೊಳೆಯಿಂದ ಕಿವಿಯಚ್ಚು ಮುಚ್ಚಿರುವುದು | ಕಿವಿಯಚ್ಚನ್ನು ಬೆಚ್ಚಗಿನ ನೀರು ಹಾಗೂ ಸೋಪು ಅಥವಾ ಶಾಂಪುವಿನಿಂದ ಸ್ವಚ್ಛಗೊಳಿಸಿ |
| | ಮುರಿದ ಸ್ವಿಚ್‌ಗಳು | ರಿಪೇರಿಗೆ ಕಳುಹಿಸಿ |
| | ಮುರಿದ ರಿಸೀವರ್ | ರಿಪೇರಿಗೆ ಕಳುಹಿಸಿ |
| ಬಿಟ್ಟಿ ಬಿಟ್ಟು ಬರುವ ಶಬ್ದಗಳು | ಮುರಿದ/ಹಾಳಾದ ತಂತಿ | ತಂತಿಯನ್ನು ಬದಲಾಯಿಸಿ |
| | ಬ್ಯಾಟರಿ ಸಂಪರ್ಕ ತೊಂದರೆ | ಬ್ಯಾಟರಿಯ ಗಾತ್ರವನ್ನು ಪರಿಶೀಲಿಸಿ. ಬ್ಯಾಟರಿಯ ಗಾತ್ರ ಸರಿಯಾಗಿದ್ದು, ಬ್ಯಾಟರಿ ಸಂಪರ್ಕಗಳು ಸಡಿಲಗೊಂಡಿದ್ದರೆ, ರಿಪೇರಿಗೆ ಕಳುಹಿಸಿ |
| | ತಂತಿ ಹಾಗೂ ಸಾಕೆಟ್ ನಡುವಿನ ಸಡಿಲವಾದ ಸಂಪರ್ಕ | ರಿಪೇರಿಗೆ ಕಳುಹಿಸಿ |
| ಕ್ಷೀಣವಾದ ಶಬ್ದ | ಕ್ಷೀಣವಾದ ಬ್ಯಾಟರಿ | ಬ್ಯಾಟರಿಗಳನ್ನು ಬದಲಾಯಿಸಿ |
| | ಭಾಗಶ: ಕಿವಿಯಚ್ಚಿನ ಮುಚ್ಚುವಿಕೆ | ಕಿವಿ ಅಚ್ಚನ್ನು ಬೆಚ್ಚಗಿನ ನೀರು ಹಾಗೂ ಸೋಪು ಅಥವಾ ಶಾಂಪುವಿನಿಂದ ಸ್ವಚ್ಛಗೊಳಿಸಿ |
| | ಶಬ್ದನಿಯಂತ್ರಕ ಮಟ್ಟ ಕಡಿಮೆ ಮಟ್ಟದಲ್ಲಿರುವುದು | ಶಬ್ದಮಟ್ಟವನ್ನು ಪರೀಕ್ಷಿಸಿ, ಸೂಚಿಸಿದ ಶಬ್ದ ಮಟ್ಟಕ್ಕೆ ತನ್ನಿ |
| | ಮುರಿದ ಸ್ವಿಚ್‌ಗಳು/ತಾಂತ್ರಿಕ ದೋಷ | ರಿಪೇರಿಗೆ ಕಳುಹಿಸಿ |
| | ಸ್ವರ ನಿಯಂತ್ರಕವು ನಿಗದಿ ಪಡಿಸಿದ ಸ್ಥಿತಿಯಲ್ಲಿರದೆ ಇರುವುದು | ಸ್ವರ ನಿಯಂತ್ರಕವನ್ನು ಪರೀಕ್ಷಿಸಿ, ಸೂಚಿಸಿದ ಸ್ಥಿತಿಗೆ ಇಡುವುದು |
| ವಿರೂಪವಾದ ಶಬ್ದ | ಮೈಕ್ರೋಫೋನ್ ಬಟ್ಟೆಯಿಂದ ಮುಚ್ಚಿದ್ದರೆ | ಮೈಕ್ರೋಫೋನಿನ ಚೌಕಟ್ಟನ್ನು ತೆರೆದಿಡಿ |
| | ರಿಸೀವರ್‌ನಲ್ಲಿ ಬಿರುಕು | ರಿಸೀವರ್ ಅನ್ನು ಬದಲಾಯಿಸಿ |
| | ಮೈಕ್ರೋಫೋನಿನಲ್ಲಿ ಧೂಳು/ಕಸ | ಮೈಕ್ರೋಫೋನನ್ನು ಸ್ವಚ್ಛಗೊಳಿಸಿ |
| | ಸಡಿಲವಾದ/ಮುರಿದ ಸ್ವಿಚ್‌ಗಳು | ರಿಪೇರಿಗೆ ಕಳುಹಿಸಿ |
| | ಕ್ಷೀಣವಾದ ಬ್ಯಾಟರಿ | ಬ್ಯಾಟರಿಗಳನ್ನು ಬದಲಾಯಿಸಿ |
| ಶ್ರವಣೋಪಕರಣದಿಂದ ಬರುವ ಕೀರಲು ಶಬ್ದ | ಮೈಕ್ರೋಫೋನ್ ರಿಸೀವರ್‌ಗೆ ತುಂಬಾ ಹತ್ತಿರದಲ್ಲಿರುವುದು | ಶ್ರವಣೋಪಕರಣವನ್ನು ಕೆಳಮಟ್ಟದಲ್ಲಿ ಧರಿಸಿ. ಮಕ್ಕಳಿಗೆ ಶ್ರವಣೋಪಕರಣ ಸಿಗಿಸುವ ಅಂಗಿಯನ್ನು ಉಪಯೋಗಿಸಿ. |
| | ಶಬ್ದ ನಿಯಂತ್ರಣ ಮಟ್ಟ ಅತಿಯಾಗಿರುವುದು | ಶಬ್ದ ನಿಯಂತ್ರಕವನ್ನು ಪರೀಕ್ಷಿಸಿ ತಿಳಿಸಿದ ಮಟ್ಟಕ್ಕೆ ತನ್ನಿ |
| | ರಿಸೀವರ್‌ನ ವಾಷರ್ ಕಾಣೆಯಾದರೆ | ಹೊಸ ವಾಷರ್ ಸೇರಿಸಿ |
| | ಕಿವಿ ಅಚ್ಚು ಸರಿಯಾಗಿ ಹಿಡಿಸದೆ ಇದ್ದಾಗ | ಹಳೆಯ ಕಿವಿಯಚ್ಚನ್ನು ಹೊಸ ಅಚ್ಚಿಗೆ ಬದಲಾಯಿಸಿ, ವಿಶೇಷವಾಗಿ ಮಕ್ಕಳಲ್ಲಿ. |
| | ಕಿವಿ ಅಚ್ಚನ್ನು ಸರಿಯಾಗಿ ಧರಿಸದೇ ಇದ್ದಾಗ | ಕಿವಿ ಅಚ್ಚನ್ನು ಕಿವಿಯ ನಾಳದಲ್ಲಿ ಸರಿಯಾಗಿ ಕೂರಿಸಿ. |
| ಬ್ಯಾಟರಿಯ ಚಾರ್ಜ್ ಬೇಗ ಖಾಲಿಯಾಗುವುದು | ಬ್ಯಾಟರಿಯನ್ನು ಶ್ರವಣೋಪಕರಣದಲ್ಲಿ ಬಹಳ ಸಮಯದ ತನಕ ಇಡುವುದು | ಶ್ರವಣೋಪಕರಣವನ್ನು ಬಹಳ ಸಮಯದವರೆಗೆ ಉಪಯೋಗಿಸದೆ ಇದ್ದರೆ, ಬ್ಯಾಟರಿಗಳನ್ನು ತೆಗೆದಿಡಿ. |
| | ಬ್ಯಾಟರಿಯನ್ನು ಅತಿಯಾದ ಬಿಸಿ/ತೇವಾಂಶದಲ್ಲಿ ಇಡುವುದು | ಬ್ಯಾಟರಿಯನ್ನು ತಂಪಾದ ಹಾಗೂ ಒಣಗಿರುವ ಜಾಗದಲ್ಲಿ ಇಡುವುದು |
| | ಅತಿಯಾದ ಕೀರಲು ಶಬ್ದದ ತೊಂದರೆಗಳು | ಕೀರಲು ಶಬ್ದದ ತೊಂದರೆಗಳನ್ನು ಸರಿಪಡಿಸಿ. ಶ್ರವಣೋಪಕರಣವು ಕೀರಲು ಶಬ್ದ/ಸಣ್ಣನೆಯ ಶಬ್ದವನ್ನು ಕೊಡುತ್ತಿದ್ದರೆ, ಬಹಳ ವೇಗವಾಗಿ ಚಾರ್ಜ್ ಕಳೆದುಕೊಳ್ಳುತ್ತದೆ. |
| ಶ್ರವಣೋಪಕರಣವನ್ನು ದೂರವಾಣಿಯಲ್ಲಿ ಬಳಸಲಾಗದೇ ಇರುವುದು | ಶಬ್ದ ನಿಯಂತ್ರಕದ ಮಟ್ಟ ಕಡಿಮೆ ಇದ್ದಾಗ | ಶ್ರವಣೋಪಕರಣದ ಶಬ್ದ ನಿಯಂತ್ರಕ ಮಟ್ಟವನ್ನು ಹೆಚ್ಚಿಸಿ |
| | ದೂರವಾಣಿಯನ್ನು ಸೂಕ್ತವಾಗಿ ಇಡದೆ ಇರುವುದು | ದೂರವಾಣಿಯ ಇಯರ್ ಪೀಸ್‌ನ್ನು ಶ್ರವಣೋಪಕರಣದ ಹತ್ತಿರ ತನ್ನಿ ಹಾಗೂ ಮೌತ್‌ಪೀಸ್‌ನ್ನು ಬಾಯಿ ಹತ್ತಿರ ತನ್ನಿ. ದೂರವಾಣಿಯ ಇಯರ್ ಪೀಸ್‌ನ್ನು ಶ್ರವಣೋಪಕರಣದ ಮೇಲಿರಿಸಿ. |

ಒಂದು ವೇಳೆ ತೊಂದರೆಯನ್ನು ನಿಮ್ಮ ಕೈಯಲ್ಲಿ ಸರಿಪಡಿಸಲು ಆಗದೇ ಇದ್ದಲ್ಲಿ, ನಿಮ್ಮ ಶ್ರವಣೋಪಕರಣವನ್ನು ಹತ್ತಿರದ ಯಾವುದೇ ಅಧಿಕೃತ ಇಂಜಿನಿಯರ್/ಟೆಕ್ನಿಶಿಯನ್‌ಗೆ ತೋರಿಸಿ. ಶ್ರವಣೋಪಕರಣದ ತೊಂದರೆಗಳನ್ನು ತಪ್ಪಿಸಲು ವರ್ಷಕ್ಕೆ ಒಂದು ಬಾರಿ ಅವುಗಳಿಗೆ ಸರ್ವೀಸ್ ಮಾಡಿಸಿ.

* ಶ್ರವಣೋಪಕರಣದ ತಂತಿಯನ್ನು ಪರೀಕ್ಷಿಸಬೇಕಾದರೆ, ನಿಮ್ಮ ಬೆರಳುಗಳಿಂದ ತಂತಿಯನ್ನು ಅದರ ಉದ್ದಳತೆಯಲ್ಲಿ ಸೂಕ್ಷ್ಮವಾಗಿ ತಿರುಗಿಸಿ. ಆಗ ಯಾವುದಾದರು ಶಬ್ದಗಳು ತಡೆದು ತಡೆದು ಬಂದರೆ ತಂತಿಯಲ್ಲಿ ತೊಂದರೆ ಇದೆ ಎಂದು ತಿಳಿಯಬಹುದು.

** ಕಿವಿ ಅಚ್ಚನ್ನು ಸರಿಯಾಗಿ ಕೂರಿಸಬೇಕಾದರೆ, ಕಿವಿಯನ್ನು ಸೂಕ್ಷ್ಮವಾಗಿ ಮೇಲಕ್ಕೆ ಮತ್ತು ಹಿಂದಕ್ಕೆ ಎಳೆದು ಕಿವಿ ಅಚ್ಚನ್ನು ಕಿವಿಯ ನಾಳಕ್ಕೆ ಸೇರಿಸಿ.